ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯ ಬೆಳ್ತಂಗಡಿ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ 25 ರಿಂದ 30 ವರ್ಷಗಳ ಹಿಂದೆ ವಿದ್ಯುತ್ ಲೈನ್ ನಿರ್ಮಾಣದಲ್ಲಿ ಅಳವಡಿಸಲಾದ ಮರದ ಕಂಬಗಳು ಇರುತ್ತವೆ. ಪ್ರಸ್ತುತ ಮರದ ಕಂಬಗಳನ್ನು ಉಪಯೋಗಿಸಲಾಗುತ್ತಿಲ್ಲ.

ಆ) ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೆಚ್.ಡಿ. ಮತ್ತು ಎಲ್.ಟಿ. ಲೈನ್‌ಗಳಲ್ಲಿ ಅನುಕ್ರಮವಾಗಿ ಸುಮಾರು 38 ಮತ್ತು 116 ಸಂಖ್ಯೆಯ ಮರದ ಕಂಬಗಳು ಉಳಿದಿರುತ್ತವೆ.

ಇ) ಪ್ರಸ್ತುತ ವಿದ್ಯುತ್ ವಿತರಣಾ ವ್ಯವಸ್ಥೆಯ ವಿದ್ಯುತ್ ಲೈನ್‌ಗಳ ಕಾಮಗಾರಿಗಳಿಗೆ ಮರದ ಕಂಬಗಳನ್ನು ಉಪಯೋಗಿಸಲು ಇಲಾಖೆಯ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಈ) ಬೆಳ್ತಂಗಡಿ ತಾಲ್ಲೂಕಿನ ವಿದ್ಯುತ್ ಲೈನ್‌ನಲ್ಲಿ ಹಾಲಿ ಉಪಯೋಗದಲ್ಲಿರುವ ಮರದ ವಿದ್ಯುತ್ ಕಂಬಗಳನ್ನು ಬದಲಾಯಿಸಲು ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ.

248 (118) ಶ್ರೀ ಕೆ. ವಸಂತ ಬಂಗೇರ, ವಿಧಾನಸಭಾ ಸದಸ್ಯರು (ಬೆಳ್ತಂಗಡಿ) : ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಬೆಳ್ತಂಗಡಿಯಲ್ಲಿ ಸಿವ್ಹಿಲ್ ಜಡ್ಜ್ ಹಿರಿಯ ವಿಭಾಗ ಮತ್ತು ಹೆಚ್ಚುವರಿ ಸಿವ್ಹಿಲ್ ಕಿರಿಯ ವಿಭಾಗಗಳಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸೂಕ್ತ ಕಟ್ಟಡದ ವ್ಯವಸ್ಥೆಗಳಿದ್ದಲ್ಲಿ, ಸಿವ್ಹಿಲ್ ಜಡ್ಜ್ ಹಿರಿಯ ವಿಭಾಗವನ್ನು ಮಂಜೂರುಗೊಳಿಸುವ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದಾದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಿವ್ಹಿಲ್ ಜಡ್ಜ್ ಹಿರಿಯ ವಿಭಾಗವನ್ನು ತೆರೆಯಲಾಗುವುದೇ ಹಾಗೂ ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಒದಗಿಸಲು ಸಿದ್ಧವಿರುವುದೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ವಹಿಸುವುದೇ?

ಶ್ರೀ ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಸರ್ಕಾರದ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹೊಸ ನ್ಯಾಯಾಲಯಗಳ ಸ್ಥಾಪನೆಯ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೆಸ್ಕಾಂನಲ್ಲಿ ಹೊಸ ಗ್ರಾಮ ವಿದ್ಯುತ್ ಸೇವಕರ ನೇಮಕಾತಿ

249 (119) ಶ್ರೀ ವಸಂತಬಂಗೇರ. ಕೆ. (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೆಸ್ಕಾಂನಲ್ಲಿ ಯಾವ ಜಿಲ್ಲೆಗಳಲ್ಲಿ ಎಷ್ಟು ಜನರನ್ನು ಗ್ರಾಮ ವಿದ್ಯುತ್ ಸೇವಕ ಹುದ್ದೆಗೆ ನೇಮಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಸಿಬ್ಬಂದಿಗಳನ್ನು ಯಾವ ಆಧಾರದಲ್ಲಿ ನೇಮಿಸಲಾಗಿದೆ;

ಇ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಗ್ರಾಮ ವಿದ್ಯುತ್ ಸೇವಕ ಹುದ್ದೆಗೆ ಸಿಬ್ಬಂದಿಗಳ ನೇಮಕದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಗ್ರಾಮ ವಿದ್ಯುತ್ ಸೇವಕ ಹುದ್ದೆಗಳು ಇರುವುದಿಲ್ಲ. ಆದರೆ ಈ ಹಿಂದೆ ಗ್ರಾಮ ವಿದ್ಯುತ್ ಪ್ರತಿನಿಧಿಗಳನ್ನು ನಿಯುಕ್ತಿಗೊಳಿಸಲಾಗಿದ್ದು, ಪ್ರಸ್ತುತ ಗ್ರಾಮ ವಿದ್ಯುತ್ ಪ್ರತಿನಿಧಿಗಳನ್ನು ಮೈಕ್ರೋಫೀಡರ್ ಪ್ರಾಂಚೈಸಿಗಳನ್ನಾಗಿ ನಿಯುಕ್ತಿಗೊಳಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ;